ಕತೆ

ಜಿ.ವಿ. ಪ್ರಭು

# ಯಾರು?

ಅಂದು ಸಂಜೆ, ಸುಮಾರು ಆರು ಗಂಟೆಯ ಸಮಯ. ಸದಾಶಿವ ಮನೆಯಲ್ಲೇ ಪ್ರಶಾಂತವಾಗಿ ಕುರ್ಚಿಯ ಮೇಲೆ ಕುಳಿತು ಕಿವಿಗೆ ಇಯರ್ ಫೋನ್ ಸಿಕ್ಕಿಸಿ ಏಕಾಗ್ರತೆಯಿಂದ ಹಾಡು ಕೇಳುತ್ತಿದ್ದಾರೆ. 'ರಾಜ್ಯ ಸೇವಾ ಆಯೋಗ'ದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿರುವ ಅವರಿಗೆ ಮಹಮ್ಮದ್ ರಫಿ ಹಾಡಿರುವ ಹಳೇ ಹಿಂದಿ ಚಿತ್ರಗೀತೆಗಳನ್ನು ಕೇಳುವುದೆಂದರೆ ಪಂಚಪ್ರಾಣ!

ಇದ್ದಕ್ಕಿದಂತೆ 'ಢಾಂ! ಢಮಾರ್!' ಅಂತ ಎರಡು ಸಾರಿ ಜೋರಾಗಿ ಶಬ್ದ ಕೇಳಿಸಿತು. ಕ್ಷಣ ಮಾತ್ರದಲ್ಲಿ ಅವರು ಕುಳಿತ್ತಿದ್ದ ಕುರ್ಚಿ ಹಿಂಭಾಗದಲ್ಲೇ ಇದ್ದ ಕಿಟಕಿ ಗಾಜಿನ ಮೂಲಕ ತೂರಿಬಂದ ಎರಡು ಗುಂಡುಗಳು ಸದಾಶಿವರ ತಲೆಯ ಕೂದಲನ್ನು ಸವರಿ ಎದುರಿನ ಗೋಡೆಯಲ್ಲಿ ನೆಟ್ಟವು! ಅನಾಹುತವೇನೂ ಆಗಿರಲಿಲ್ಲ.

ಅನಿರೀಕ್ಷಿತ ಘಟನೆಯಿಂದ ತಲ್ಲಣಿಸಿದ ಸದಾಶಿವ, ಕಿವಿಯ ಇಯರ್ ಫೋನನ್ನು ತೆಗೆದುಹಾಕಿ, ಏನು ನಡೆಯುತ್ತಿದೆ ಎಂದು ದಿಙ್ಮೂಢರಾಗಿ ನೋಡತೊಡಗಿದರು. ಸುತ್ತಲೂ ಏನೂ ಕಾಣಿಸುತ್ತಿಲ್ಲ. ಆದರೆ, ಮರುಕ್ಷಣದಿಂದಲೇ ಅವರನ್ನು ಭಯ ಆವರಿಸಿತು. ತಾನು ಕುಳಿತ ಕುರ್ಚಿಯ ಹಿಂದಿನ ಕಿಟಕಿ ಮೂಲಕ ಪಿಸ್ತೂಲಿನಿಂದ ಗುಂಡು ಹಾರಿಸಿ ತನ್ನನ್ನು ಕೊಲೆ ಮಾಡುವ ಪ್ರಯತ್ನ ಮಾಡಿದ್ದಾರೆ! ಎರಡು ಗುಂಡುಗಳು ಗುರಿ ತಪ್ಪಿ ಕಿಟಕಿ ಗಾಜನ್ನು ರಂಧ್ರ ಮಾಡಿ ಗೋಡೆಯಲ್ಲಿ ನೆಟ್ಟಿವೆ. ತಕ್ಷಣವೇ ಗುಂಡು ಹಾರಿಸಿದವನನ್ನು ಬೆನ್ನಟ್ಟಿ ಹಿಡಿದು ಹೊಡೆಯಬೇಕೆನ್ನುವಷ್ಟು ಕೋಪ ಬಂತು ಸದಾಶಿವರಿಗೆ. ಆದರೆ, ಎಷ್ಟು ದೊಡ್ಡ ವ್ಯಕ್ತಿಯಾದರೂ ಆವೇಶದಲ್ಲಿ ಆ ಕ್ಷಣದಲ್ಲಿ ಮೂಡುವ ಯೋಚನೆಗಳನ್ನು ಕಾರ್ಯರೂಪಕ್ಕೆ ತರದೆ ವಿವೇಕಯುತವಾಗಿ ವರ್ತಿಸುತ್ತಾನೆ. ಸದಾಶಿವರೂ ದೊಡ್ಡ ವ್ಯಕ್ತಿಯೇ! ಆದ್ದರಿಂದ ಕೂಡಲೇ ಕೂತಲ್ಲಿಂದ ಎದ್ದು ಬಸವನಗುಡಿ ಪೊಲೀಸ್ ಠಾಣೆಗೆ ಕರೆ ಮಾಡಿದರು...

'ಹಲೋ, ಸಾರ್! ಈ ಕೂಡಲೇ ಇಲ್ಲಿಗೆ ನಿಮ್ಮ ಪೊಲೀಸ್ ಸಿಬ್ಬಂದಿಯನ್ನು ಕಳುಹಿಸಿಕೊಡಿ. ನನ್ನ ಮೇಲೆ ಈಗತಾನೇ ಒಂದು ಕೊಲೆ ಪ್ರಯತ್ನ ನಡೆದಿದೆ' ಎಂದು ಸದಾಶಿವ ಕಂಪಿಸುವ ಧ್ವನಿಯಲ್ಲಿ ಹೇಳಿದರು.

'ಎಲ್ಲಿಗೆ ಕಳುಹಿಸಿಕೊಡಬೇಕು?' ಅತ್ತಕಡೆಯಿಂದ ಒಂದು ನಿರಾಸಕ್ತ ಕಂಠ ತೇಲಿಬಂತು.

'ಇನ್ನೆಲ್ಲಿಗೆ! ನನ್ನ ಅಪಾರ್ಟ್‌ಮೆಂಟಿಗೆ. ತನ್ನ ಮನೆಯಲ್ಲಿ ಪ್ರಶಾಂತವಾಗಿ ಕುಳಿತಿದ್ದ ಒಬ್ಬ ಸಭ್ಯ ನಾಗರಿಕನ ಮೇಲೆ ಯಾವುದೇ ಕಾರಣವಿಲ್ಲದೆ ಕೊಲೆ ಪ್ರಯತ್ನ ನಡೆದಿದೆ. ಅದು ಹೇಯ ಹಾಗೂ ಅಮಾನುಷ. ಈ ವಿಷಯವನ್ನು ನೀವು ಬಹಳ ಗಂಭೀರವಾಗಿ, ಸೂಕ್ಷ್ಮವಾಗಿ ಪರಿಶೀಲಿಸಬೇಕಾಗುತ್ತದೆ' ಎಂದರು.

'ಸರಿ ಸಾರ್... ನಿಮ್ಮ ವಿಳಾಸ ಹೇಳಿ.'